

ಸೂರ್ಯಕುಂಚ ಸ್ಪರ್ಶದಿಂದ ಮಂಜಿನ ಹಾದಿಗೆ ಬಂಗಾರದ ಬಣ್ಣ



ಬದುಕಿನ ಯಾವುದೋ ಸತ್ಯ ಕಾಣಿಸುವವಳಂತೆ ಚಾರಣದ ದಾರಿಯಲ್ಲಿ ಎಡತಾಕಿದ ಅಜ್ಜಿ

ಮತ್ತು ಚಾರಣಸಿದ್ಧತೆಗಳನ್ನು ಹೊಂದಿಸಿಕೊಂಡು ಹೋಗಬೇಕಾದ ಯಾನ.

ಹಿಮಾಲಯದ ಮೈಜುಮ್ಮೆನಿಸುವ ಆಳವಾದ ಕಣಿವೆಗಳು, ಕಣ್ಣುಕಿರಿದಾಗಿಸಿ ನೋಡಿದರೆ ಕಾಣುವ ಪ್ರಪಾತದಲ್ಲಿ ಹರಿಯುತ್ತಿರುವ ನದಿಗಳು, ಹಿಮ್ಮುಖವಾಗಿ ಚಂಡುಮುರಿದು ನೋಡಬೇಕಾದ ಶಿಖರಗಳು, ಬೆಟ್ಟದಂಚನ್ನು ಕೊರೆದು ಮಾಡಿರುವ ರಂಗೋಲಿ ಇಟ್ಟಂತಿರುವ ಕಿರಿದಾದ ರಸ್ತೆಗಳು, ಪಾರ್ವತಿಯ ಬೈತಲೆಯಂತೆ ಕಾಣುವ ದೂರ ಶಿಖರದ ಹಿಮಪಾತಗಳು, ಕೋಟಿ ಕೋಟಿ ನಕ್ಷತ್ರಗಳ ನಡುವೆ ನಿಂತಂತೆ ಆಗುವ ಮೈಜುಮ್ಮೆನ್ನಿಸುವ ರಾತ್ರಿಯ ನಿರಭ್ರ ಆಕಾಶ, ನಡುವೆ ಚುಕ್ಕೆಯಾಗಿ ಇನ್ನೇನು ಕರಗಿಬಿಡುತ್ತಾರೆ ಎಂಬಂತಿರುವ ನೋಡುಗರು – ಇವೆಲ್ಲ ಅನುಭವಕ್ಕೆ ಮಾತ್ರ ದಕ್ಕುವ ಸಂಗತಿಗಳು. ನಮ್ಮನ್ನು ನಾವು ಒಮ್ಮೆಯಾದರೂ ಇಲ್ಲವಾಗಿಸಿಕೊಳ್ಳಲು ಹಿಮಾಲಯದ ಮಡಿಲು ಅತ್ಯಂತ ಸೂಕ್ತವಾದುದು. ಅಲ್ಲಿಗೆ ಹೋಗಿಬರುವುದು ನಿಜವಾಗಿ ಜೀವನದ ಸ್ಮರಣೀಯ ಅನುಭವ.

## ಕನ್ನಡದ ಪ್ರಯಾಣ

ಕೇದಾರನಾಥ, ಕೇದಾರ ಕಂಠ – ಇವೆಲ್ಲ